KACN320053542024

**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೊಳ್ಳೇಗಾಲ.</u>**

**<u>ದಿನಾಂಕಃ 02ನೇ ಜುಲೈ 2026</u>**

**<u>ಉಪಸ್ಥಿತರು</u>**

**ಶ್ರೀಮತಿ. ಕಾವ್ಯಶ್ರೀ ಎಂ.**
**ಬಿ.ಎ., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ಕೊಳ್ಳೇಗಾಲ.**

**<u>ಅಸಲು ದಾವಾ ಸಂಖ್ಯೆ 406/2024</u>**

ವಾದಿ : ಶ್ರೀ ಮಲ್ಲಯ್ಯ

**(ಪ್ರತಿನಿಧಿಸುವವರುಃ ಶ್ರೀ.ಡಿ. ಎಸ್., ವಕೀಲರು)**

**ವಿರುದ್ದ**

ಪ್ರತಿವಾದಿಗಳು : ಸೋಮಣ್ಣ

**(ಪ್ರತಿನಿಧಿಸುವವರುಃ ಶ್ರೀ.ಎಂ.ಎಸ್.ಕೆ., ವಕೀಲರು)**

**<u>-:ಮಧ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ:-</u>**

ಅರ್ಜಿದಾರರುಃ ಮಲ್ಲಯ್ಯ

……. **ವಾದಿ**

**- ವಿರುದ್ಧ -**

ಎದುರುದಾರರುಃ ಸೋಮಣ್ಣ

……. **ಪ್ರತಿವಾದಿ**

| | | |
|---|---|---|
| i | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ 39 ನಿಯಮ 1 ಮತ್ತು 2 |
| ii | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ಕೋರಿ |
| iii | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | 16.12.2024 |
| iv | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆ: 2 |
| v | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | 09.06.2025 |
| vi | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | 02.07.2026 |

**<u>ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 39 ನಿಯಮ 1 ಮತ್ತು 2ರ ಮೇಲಿನ ಆದೇಶ</u>**

ಅರ್ಜಿದಾರರು/ವಾದಿಯು ದಿವಾನಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ದಾವೆಯನ್ನು ದಾಖಲು ಮಾಡಿ ಪ್ರತಿವಾದಿಗಳಾಗಲೀ, ಅವರ ಪ್ರತಿನಿಧಿಸುವವರಾಗಲೀ ಅಥವಾ ಅವರ ಸಂಬಂಧಿಕರಾಗಲಿ ಯಾರು ಸಹ ದಾವಾ ಅನುಸೂಚಿತ ಸ್ವತ್ತಿನ ದಕ್ಷಿಣ ಪಾರ್ಶ್ವದಲ್ಲಿ ಅತಿಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡಿಕೊಳ್ಳದಂತೆ ತಾತ್ಕಾಲಿಕ ನಿರ್ಭಂದಕಾಜ್ಞೇಯನ್ನು ಕೋರಿಕೊಂಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಅರ್ಜಿದಾರರು ಅರ್ಜಿದಾರರ ತಂದೆ ಚಿನ್ನಮಾರಯ್ಯ ರವರಿಗೆ ಉಪ ವಿಭಾಗಾಧಿಕಾರಿಗಳು ಡಿ.ಆರ್. ನಂಬರ್ 1426/1963-64 ರಂತೆ ದಿನಾಂಕ 02.06.1972 ರಂದು ಕೊಳ್ಳೇಗಾಲ ತಾಲೂಕು, ಪಾಳ್ಯ ಹೋಬಳಿ, ಚಿಕ್ಕಲ್ಲೂರು ಗ್ರಾಮದ ಸರ್ವೆ ನಂಬರ್ 170/ ಸಿ3 ರಲ್ಲಿ ವಿಸ್ತೀರ್ಣ 3 ಎಕರೆ 46 ಸೆಂಟ್ ಜಮೀನು ಹಾಗೂ ಸರ್ವೆ

ನಂಬರ್ 328/3ರಲ್ಲಿ ವಿಸ್ತೀರ್ಣ 52 ಸೆಂಟ್ ಜಮೀನನ್ನು ಮಂಜೂರು ಮಾಡಿದ್ದು, ಸದರಿ ಸ್ವತ್ತಿನಲ್ಲಿ ವಾದಿಯ ತಂದೆ ಸ್ವಾಧೀನವನ್ನು ಹೊಂದಿಕೊಂಡು ಬಂದಿರುತ್ತಾರೆ. ವಾದಿಯ ತಂದೆಗೆ ಮಂಜೂರಾದ ಸರ್ವೆ ನಂಬರ್ 170/ಸಿ3 ರ ವಿಸ್ತೀರ್ಣ 3 ಎಕರೆ 46 ಸೆಂಟ್ಸ್ ಸ್ವತ್ತುನ್ನು ಸರ್ವೆ ನಂಬರ್ 170/ಸಿ2 ರಲ್ಲಿ ವಿಸ್ತೀರ್ಣ 1 ಎಕರೆ 53 ಸೆಂಟ್ ಹಾಗೂ 170/ಸಿ4 ರಲ್ಲಿ ವಿಸ್ತೀರ್ಣ 1 ಎಕರೆ 80 ಸೆಂಟ್ ಜಮೀನುಗಳಾಗಿ ವಿಂಗಡಿಸಿದ್ದು ಆನಂತರವೂ ಸಹ ವಾದಿಯ ತಂದೆಯವರೇ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿಕೊಂಡು ಬರುತ್ತಿರುತ್ತಾರೆ. ದಿನಾಂಕ 14-10-2007ರಂದು ವಾದಿಯ ತಂದೆ ಮರಣ ಹೊಂದಿದ್ದು ಆನಂತರ ವಾದಿ ಮತ್ತು ಅವರ ಕುಟುಂಬದವರು ಸ್ವತ್ತಿನ ಸ್ವಾದೀನವನ್ನು ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿರುತ್ತಾರೆ.

ವಾದಿಯ ತಂದೆಯ ಮರಣದ ನಂತರ ಅವರ ಕಾನೂನುಬದ್ದ ವಾರಸುದಾರರಾದ ಮಲ್ಲಯ್ಯ, ಚಿನ್ನಮಾರಯ್ಯ, ಮಲ್ಲಮ್ಮ ಮಹದೇವಮ್ಮ ಹಾಗೂ ಪುಟ್ಟಸಿದ್ದಮ್ಮರವರ ಹೆಸರಿಗೆ ಎಂ.ಆರ್.ಹೆಚ್.5/2014-15 ರಂತೆ ದಿನಾಂಕ 21-07-2014 ರಂದು ಪೌತಿ ಖಾತೆ ಆಗಿರುತ್ತದೆ. ಆನಂತರ ದಿನಾಂಕ 21-11-2014ರಂದು ವಾದಿಯ ಸಹೋದರ ಮತ್ತು ಸಹೋದರಿಯರು ಸರ್ವೇ ನಂಬರ್ 170/ಸಿ2 ರ ವಿಸ್ತೀರ್ಣ 1 ಎಕರೆ 53 ಸೆಂಟ್ ಹಾಗೂ ಸರ್ವೇ ನಂಬರ್ 170/ಸಿ4 ರ ವಿಸ್ತೀರ್ಣ 1 ಎಕರೆ 81 ಸೆಂಟ್ ಸ್ವತ್ತು ಜಮೀನಿನಲ್ಲಿರುವ ತಮ್ಮ ಹಕ್ಕನ್ನು ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿಗಳಿಗೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಹಿತಾಸಕ್ತಿಯಿಲ್ಲದೆ ಇದ್ದರೂ ಸಹ ವಾದಿಯ ದಾವಾ ಅನುಸೂಚಿತ ಸ್ವತ್ತಿನ ದಕ್ಷಿಣಪಾರ್ಶ್ವದಲ್ಲಿ ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದು ದಿನಾಂಕ 25-11-2024ರಂದು ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ವ್ಯವಸಾಯ ಮಾಡಲು ಹೋದಾಗ ಅಡ್ಡಿಯನ್ನು ಉಂಟು ಪಡಿಸಿರುತ್ತಾರೆ. ಆದ್ದರಿಂದ ದಾವೆ ತೀರ್ಮಾನವಾಗುವವರೆಗೂ ತಾತ್ಕಾಲಿಕ ನಿರ್ಭಂದಕಾಜ್ಞೇಯನ್ನು ಆದೇಶಿಸುವಂತೆ ಕೋರಿಕೊಂಡಿರುತ್ತಾರೆ.

3. ನ್ಯಾಯಾಲಯದ ಸಮಕ್ಷಮ ಪ್ರತಿವಾದಿಗಳು ಹಾಜರಾಗಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಂಡಿದ್ದು ಸದರಿ ಪ್ರತಿವಾದ ಪತ್ರದ ಸಂಗತಿಗಳನ್ನೇ ತಕರಾರನ್ನಾಗಿ ಪರಿಗಣಿಸುವಂತೆ ಕೋರಿ ಕೊಂಡಿರುತ್ತಾರೆ. ಪ್ರತಿವಾದಿಯೂ ತಮ್ಮ ತಕರಾರಿನಲ್ಲಿ ವಾದಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಕೊಳ್ಳೇಗಾಲ ತಾಲ್ಲೂಕು, ಪಾಳ್ಯ ಹೋಬಳಿ, ಚಿಕ್ಕಲೂರು ಗ್ರಾಮದ ಹಳೆಯ ಸರ್ವೆ ನಂಬರ್ 170/ಸಿ ಹಾಗೂ ಹೊಸ ಸರ್ವೆ ನಂಬರ್ 170/ಸಿ1ರ ವಿಸ್ತೀರ್ಣ 2 ಎಕರೆ 50 ಸೆಂಟ್ ಸ್ವತ್ತು ಮೂಲತಃ ಸರ್ಕಾರಿ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ದಿನಾಂಕ 18-01-1978ರಲ್ಲಿ ಸರ್ಕಾರವು ಎಲ್.ಎನ್.ಡಿ. ಸಂಖ್ಯೆ 264/77-78 ರಂತೆ ಪ್ರತಿವಾದಿಯ ತಾಯಿ ಹೂವಮ್ಮರವರಿಗೆ ಮಂಜೂರು ಮಾಡಿರುತ್ತದೆ. ದಾವಾ ಅನಸೂಚಿತ ಸ್ವತ್ತಿನ ಖಾತೆಯು ಪ್ರತಿವಾದಿಯ ತಾಯಿ ಶ್ರೀಮತಿ ಹೂವಮ್ಮರವರ ಹೆಸರಿಗೆ ಎಲ್.ಎನ್.ಡಿ.264/1977-78 ರಂತೆ ದಾಖಲಾಗಿರುತ್ತದೆ. ದಿನಾಂಕ 06-4-2020ರಂದು ಪ್ರತಿವಾದಿಯ ತಾಯಿ

ಹೂವಮ್ಮರವರು ಮರಣ ಹೊಂದಿದ್ದು, ಆನಂತರ ಪ್ರತಿವಾದಿ ಹಾಗೂ ಅವರ ಸಹೋದರಿಯರ ಹೆಸರಿನಲ್ಲಿ ಸ್ವತ್ತು ವರ್ಗಾವಣೆ ಆಗಿರುತ್ತದೆ. ಅದರಂತೆ ಹಳೆ ಸರ್ವೆ ನಂಬರ್ 170/ಸಿ ಹಾಗೂ ಹೊಸ ಸರ್ವೆ ನಂಬರ್ 170/ಸಿ1ರ ಒಟ್ಟು ವಿಸ್ತೀರ್ಣ 2 ಎಕರೆ 50 ಸೆಂಟ್ ಸ್ವತ್ತು ವಾರಸುದಾರರ ಮೂಲಕ ಪ್ರತಿವಾದಿ ಮತ್ತು ಅವರ ಸಹೋದರರಿಗೆ ಬಂದ ಸ್ವತ್ತಾಗಿರುತ್ತದೆ. ವಾದಿಗೂ ದಾವಾ ಅನುಸೂಚಿತ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಈ ರೀತಿ ಇದ್ದರೂ ಸಹ ವಾದಿಯು ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ನೀಡಲು ಪ್ರಯತ್ನಿಸುತ್ತಿದ್ದ ಕಾರಣ 25-12-2024ರಂದು ಕೊಳ್ಳೇಗಾಲದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿರುತ್ತದೆ. ಆನಂತರ, ಈ ನ್ಯಾಯಾಲಯದ ಸಮಕ್ಷಮ ಅಸಲುದಾವಾ ಸಂಖ್ಯೆ 11/2025ರಂತೆ ಪ್ರತಿವಾದಿಯ ವಿರುದ್ಧ ದಾವೆಯನ್ನೂ ಸಹ ದಾಖಲು ಮಾಡಲಾಗುತ್ತದೆ. ಸದರಿ ದಾವಾ ಅನುಸೂಚಿತ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿರುತ್ತಾರೆ, ಈ ಎಲ್ಲಾ ಕಾರಣಗಳಿಂದಾಗಿ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಳ್ಳುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ನಂತರ ವಾದಿಯು ಸಲ್ಲಿಸಿರುವ ಮಧ್ಯಂತರ ಅಜಿರ್ಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ

1. ತಾತ್ಕಲಿಕ ನಿರ್ಭಂದಕಾಜ್ಞೇಯನ್ನು ಪಡೆಯಲು ವಾದಿಯ ಮೇಲ್ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ?
3. ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿರುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾರದ ಕ್ಷತಿಯುಂಟಾಗುತ್ತದೆಯೇ?
4. ಯಾವ ಆದೇಶ?

5. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮಕ್ಷಮ ಇರುವ ದಾಖಲೆಗಳನ್ನು ಕೂಲಕೂಂಷವಾಗಿ

ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ -1 : ನಕರಾತ್ಮಕವಾಗಿ
ಅಂಶ -2 : ನಕರಾತ್ಮಕವಾಗಿ
ಅಂಶ -3 : ನಕರಾತ್ಮಕವಾಗಿ
ಅಂಶ -4 : ಅಂತಿಮ ಆದೇಶದಂತೆ,

:: **ಕಾರಣಗಳು** ::

6. **ಅಂಶ-1 ರಿಂದ 3**:- ಅಂಶ-1 ರಿಂದ 3 ಒಂದನ್ನೊಂದು ಅವಲಂಬಿಸಿದ್ದು, ಹಾಗು ಅವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದ ಚರ್ಚೆ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದುದರಿಂದ, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ, ಈ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

7. ವಾದಿಯೂ ಕೊಳ್ಳೆಗಾಲ ತಾಲೂಕು, ಪಾಳ್ಯ ಹೋಬಳಿ ಚಿಕ್ಕಲೂರು ಗ್ರಾಮದ ಸರ್ವೇ ನಂಬರ್ 170/ಸಿ2 ವಿಸ್ತೀರ್ಣ 1 ಎಕರೆ 53 ಸೆಂಟ್ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಭಂಧಕಾಜ್ಞೇ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ವಾದಿಯು ತನ್ನ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ದಾವಾ ಅನಸೂಚಿತ ಸ್ವತ್ತು ಮೂಲತಃ ವಾದಿಯ ತಂದೆಗೆ ಸರ್ವೆ ನಂಬರ್ 170/ಸಿ3ರಲ್ಲಿ ವಿಸ್ತೀರ್ಣ 3 ಎಕರೆ 46 ಸೆಂಟ್ ಸ್ವತ್ತು ಮಂಜೂರಾಗಿದ್ದು, ಸದರಿ ಸ್ವತ್ತು ಸರ್ವೆ ನಂ. 170/ ಸಿ2ರ ವಿಸ್ತೀರ್ಣ 1 ಎಕರೆ 53 ಸೆಂಟ್ ಹಾಗೂ ಸರ್ವೇ ನಂಬರ್ 170/ಸಿ4ರ ವಿಸ್ತೀರ್ಣ 1 ಎಕರೆ 81 ಸೆಂಟ್ ಗಳಾಗಿ ಪೋಡುಗಳಾಗಿರುತ್ತವೆ. ವಾದಿಯ ತಂದೆಯು ಬದುಕಿರುವವರೆಗೂ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ಆನಂತರ, ಅವರ ಕಾನೂನುಬದ್ದ ವಾರಸುದಾರರು ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ವಾದಿಯ ಕುಟುಂಬದಲ್ಲಿ ಆದ ಹಕ್ಕು ಬಿಡುಗಡೆ ಪತ್ರದಂತೆ ವಾದಿಯು ಈ ದಾವಾ ಅನುಸೂಚಿತ ಸ್ವತ್ತಿನಲ್ಲಿ ಹಕ್ಕನ್ನು ಹೊಂದಿದ್ದು, ಪ್ರತಿವಾದಿಯು ದಾವಾ ಅನುಸೂಚಿತ ದಕ್ಷಿಣ ಪಾರ್ಶ್ವದಲ್ಲಿ ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಿಸಿರುವುದಾಗಿ ದಾವೆಯನ್ನು ದಾಖಲು ಮಾಡಿರುತ್ತಾರೆ. ವಾದಿ ತಾನು ದಾವಾ ಅನುಸೂಚಿತ ಸ್ವತ್ತಿನ ಸ್ವಾದೀನಾನುಭವದಲ್ಲಿ ಇದ್ದು ಪ್ರತಿವಾದಿಗಳು ತೊಂದರೆ ನೀಡುತ್ತಿರುವ ಕಾರಣ ತಾತ್ಕಾಲಿಕ ನಿರ್ಭಂದಕಾಜ್ಞೇ ಆದೇಶಿಸುವಂತೆ ಕೋರಿಕೊಂಡಿದ್ದಾರೆ.

8. ಆ ನಿಟ್ಟಿನಲ್ಲಿ ವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಚಿಕ್ಕಲೂರು ಗ್ರಾಮದ ಸರ್ವೇ ನಂಬರ್ 170ರ ವಿಸ್ತೀರ್ಣ 3 ಎಕರೆ 46 ಸೆಂಟ್ ಸ್ವತ್ತನ್ನು ದಿನಾಂಕ 02-06-1972 ರಂದು ಚಿನ್ನಮಾರ ಬಿನ್ ಮಲ್ಲ ಎಂಬುವವರಿಗೆ ಮಂಜೂರು ಮಾಡಲಾಗಿರುತ್ತದೆ. ಆ ಬಗ್ಗೆ ನ್ಯಾಯಲಯದ ಸಮಕ್ಷಮ ದಾಖಲಾತಿ ಲಭ್ಯ

ಇರುತ್ತದೆ. ಮುಂದುವರೆದು, ವಾದಿಯ ತಂದೆಗೆ ಮಂಜೂರಾದ ಸ್ವತ್ತು ಸರ್ವೇ ನಂ. 170/ಸಿ2 ಹಾಗೂ 170/ ಸಿ4ರಂತೆ ಪೋಡುಗಳನ್ನಾಗಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ವಾದಿಯ ತಂದೆಗೆ ಮಂಜೂರಾದ ಸರ್ವೆ ನಂಬರ್ 170/ಸಿ2 ಹಾಗೂ ಸರ್ವೇ ನಂ. 170/ಸಿ4 ನ್ನು ಪೋಡುಗಳನ್ನಾಗಿ ಮಾಡಿರುತ್ತಾರೆ, ಹಾಗೂ ವಾದಿಯ ತಂದೆಗೆ ಮಂಜೂರಾದ ಸ್ವತ್ತುಗಳು ಪೋಡುಗಳಾಗಿರುತ್ತದೆ ಎಂಬುದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲತಿಗಳು ನ್ಯಾಯಾಲಯದ ಸಮಕ್ಷಮ ಲಭ್ಯವಿರುವುದಿಲ್ಲ. ಈ ಹಂತದಲ್ಲಿ ವಾದಿಯ ಚಿನ್ನಮಾರ ಬಿನ್ ಮಲ್ಲ ರವರಿಗೆ ಮಂಜೂರಾಗಿದ್ದ ಸರ್ವೇ ನಂಬರ್ 170/ಸಿ3 ರ ವಿಸ್ತೀರ್ಣ 3 ಎಕರೆ 46 ಸೆಂಟ್ ಸ್ವತ್ತು ಸರ್ವೇ ನಂಬರ್ 170/ ಸಿ2 ಹಾಗೂ ಸರ್ವೇ ನಂಬರ್ 170/ಸಿ4 ಗಳಾಗಿ ಪೋಡುಗಳಾಗಿತ್ತು ಎಂಬ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ ಹಾಗೂ ಮೇಲ್ನೋಟಕ್ಕೆ ಸದರಿ ಸ್ವತ್ತು ಪೋಡುಗಳಾಗಿತ್ತು ಎಂಬುದರ ಬಗ್ಗೆ ನಿಖರ ಮಾಹಿತಿ ಲಭ್ಯವಿರುವುದಿಲ್ಲ.

9. ಮುಂದುವರೆದು, ಸರ್ವೆ ನಂ 17/ಸಿ2 ಸ್ವತ್ತುಗಳು ಸರ್ವೇ ನಂಬರ್ 170/ಸಿ3 ಮತ್ತು ಸರ್ವೇ ನಂಬರ್ 170/ಸಿ4 ಪೋಡುಗಳಾಗಿರುತ್ತದೆ ಎಂಬುದಕ್ಕೆ ಸಂಬಂದಿಸಿದಂತೆ ದಾಖಲತಿಗಳು ಲಭ್ಯವಿಲ್ಲದೇ ಇದ್ದರೂ ಸಹ, ವಾದಿಯು ಹಾಜರು ಪಡಿಸಿರುವ ಕೈಬರಹದ ಪಹಣಿ ಪತ್ರಿಕೆಯನ್ನು ಗಮನಿಸಲಾಗಿ 1986-87 ನೇ ಸಾಲಿನ ಕೈಬರಹದ ಪಹಣಿ ಪತ್ರಿಕೆಯಲ್ಲಿ ಸರ್ವೇ ನಂಬರ್ 170/ಸಿ2 ರ ವಿಸ್ತೀರ್ಣ 1 ಎಕರೆ 53 ಸೆಂಟ್ ಸ್ವತ್ತು ಚಿನ್ನಮಾರ ಎಂಬ ಹೆಸರಿನಲ್ಲಿ ನಮೂದಾಗಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ 1996-97 ಕೈಬರಹದ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಯಲ್ಲಿ ಚಿನ್ನಮಾರ ಬಿನ್ ಮಲ್ಲಯ್ಯರವರ ಹೆಸರಿನಲ್ಲಿ ಪಹಣಿಪತ್ರಿಕೆ ನಮೂದಾಗಿರುವುದು ಕಂಡುಬರುತ್ತಿದೆ. ಅದರಂತೆ ದಾವಾ ಅನುಸೂಚಿತ ಸ್ವತ್ತು ದರಖಾಸ್ತು ಸಂಖ್ಯೆ 1426/1962-63 ರಂತೆ ಚಿನ್ನಮಾರರವರಿಗೆ ಸ್ವತ್ತು ಮಂಜೂರಾಗಿರುವುದು 1996-97ನೇ ಸಾಲಿನ ಕೈಬರಹದ ಪಹಣಿ ಪತ್ರಿಕೆಯಿಂದ ಕಂಡುಬರುತ್ತಿದೆ.

ಅದರಂತೆ, ಚಿನ್ನಮಾರ ಬಿನ್ ಮಾದರವರಿಗೆ ಮಂಜೂರು ಆದೇಶದಂತೆ, ಪಹಣಿ ಪತ್ರಿಕೆಯು ನಮೂದಾಗಿರುವುದು ಕಂಡು ಬರುತ್ತಿದೆ. ಸದರಿ ಚಿನ್ನಮಾರರವರ ನಂತರ ಅವರ ಕಾನೂನುಬದ್ದ ವಾರಸುದಾರರುಗಳ ಹೆಸರಿಗೆ ಖಾತೆ ವರ್ಗಾವಣೆಯಾಗಿದ್ದು, ಆ ನಂತರ, ವಾದಿಗಳಿಗೆ ಅವರ ಸಹೋದರ ಮತ್ತು ಸಹೋದರಿಯರು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂದಿಸಿದಂತೆ ದಿನಾಂಕಃ 21.11.2014ರ ಹಕ್ಕು ಬಿಡುಗಡೆ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತಿದೆ. ಸದರಿ ದಾಖಲಾತಿಯಂತೆ ಈ ದಾವೆಯನ್ನು ದಾಖಲು ಮಾಡುವ 10 ವರ್ಷಗಳ ಮೊದಲೇ ದಾವಾ ಅನುಸೂಚಿತ ಸ್ವತ್ತು ವಾದಿಗೆ ಬಂದಿರುವುದು ಕಂಡುಬರುತ್ತದೆ. ಇನ್ನು ಉಳಿದಂತೆ ದಾವಾ ಅನುಸೂಚಿತ ಸ್ವತ್ತು

ಮಲ್ಲಯ್ಯರವರ ಹೆಸರಿನಲ್ಲಿ ನಮೂದಿರುವುದು ಅವರು ಹಾಜರುಪಡಿಸಿರುವ ಕಂದಾಯ ದಾಖಲಾತಿಗಳಲ್ಲಿ ಕಂಡುಬರುತ್ತಿದೆ. ಮುಂದುವರೆದು, ದಾವಾ ಅನುಸೂಚಿತ ಸ್ವತ್ತನ್ನು 2021ನೇ ಸಾಲಿನಲ್ಲಿ ಅಂದರೆ ದಾವೆಯನ್ನು ದಾಖಲು ಮಾಡುವ ಸುಮಾರು 3 ರಿಂದ 4 ವರ್ಷಗಳ ಮೊದಲು ಅಲ್ಪಾವಧಿ ಸಾಲಕ್ಕಾಗಿ ಅಡಮಾನ ಮಾಡಿರುವುದು ಸಹ ಕಂಡುಬರುತ್ತಿದೆ. ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸದಂತೆ ಹಾಜರು ಪಡಿಸಿರುವ ಕೈಬರಹದ ಪಹಣಿ ಪತ್ರಿಕೆಗಳು ಚಿನ್ನಮಾರರವರ ಹೆಸರಿನಲ್ಲಿ ನಮೂದು ಇದ್ದು ಆನಂತರ, ವಾದಿಗೆ ಹಕ್ಕು ಬಿಡುಗಡೆ ಪತ್ರದ ಮೂಲಕ ಬಂದಿದ್ದು ಪ್ರಸ್ತುತ ದಾವೆಯನ್ನು ದಾಖಲು ಮಾಡುವ ಕಾಲಕ್ಕೆ ವಾದಿಯ ಹೆಸರಿನಲ್ಲಿ ದಾವಾ ಅನುಸೂಚಿತ ಸ್ವತ್ತಿನ ಖಾತೆ ನಮೂದಾಗಿರುವುದು ಕಂಡುಬರುತ್ತದೆ. ಆದರೆ ಸದರಿ ಸ್ವತ್ತಿನಲ್ಲಿ ಸಂಪೂರ್ಣವಾಗಿ ವಾದಿಯೇ ಸ್ವಾಧೀನಾನುಭವದಲ್ಲಿರುವುದಾಗಿ ವಾದಿಯು ಹಾಜರುಪಡಿಸಿರುವ ನೊಂದಾಯಿತ ದಾಖಲಾತಿಗಳಿಂದ ಕಂಡು ಬರುತ್ತಿದೆ.

10. ಮುಂದುವರೆದು, ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾದೀನಾನುಭವಕ್ಕೆ ದಕ್ಕೆಯನ್ನು ಉಂಟುಪಡಿಸಿರುತ್ತಾರೆ ಎಂಬುದಾಗಿ ರುಜುವಾತುಪಡಿಸುವ ನಿಟ್ಟಿನಲ್ಲಿ ಹದ್ದುಬಸ್ತು ನಕಾಶೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಯಂತೆ ಸರ್ವೇ ನಂಬರ್ 170/ಸಿ2 ರ ಹದ್ದುಬಸ್ತು ನಕಾಶೆ ಆಗಿದ್ದು, ವಾದಿಯ ಅರ್ಜಿಯಂತೆ ಸರ್ವೆ ನಂಬರ್ 170/ಸಿ2 ಸ್ವತ್ತನ್ನು ಸರ್ವೆ ಮಾಡಿದ್ದು, ಸದರಿ ಸರ್ವೆಯಂತೆ ಸರ್ವೆ ನಂಬರ್ 170/ಸಿ1 ರ ಹಿಡುವಳಿದಾರರು ಸರ್ವೆ ನಂಬರ್ 170/ಸಿ2 ರ ಸ್ವತ್ತಿನಲ್ಲಿ 40 ಸೆಂಟ್ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುವುದು ಕಂಡುಬರುತ್ತಿದೆ ಎಂಬುದಾಗಿ ವರದಿ ನೀಡಿರುವುದು ಕಂಡು ಬರುತ್ತಿದೆ. ಅದರಂತೆ, ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿನ 40 ಸೆಂಟ್ ಸ್ವತ್ತಿನಲ್ಲಿ ಸ್ವಾದೀನಾನುಭವದಲ್ಲಿ ಇರುವುದು ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಸದರಿ ಹದ್ದುಬಸ್ತು ನಕಾಶೆ ಹಾಗೂ ಅದರಲ್ಲಿನ ವರದಿಯಂತೆ, ಪ್ರತಿವಾದಿಯು ವಾದಿಯ ದಾವಾ ಅನುಸೂಚಿತ ಸ್ವತ್ತಿನ 40 ಸೆಂಟ್ ವಿಸ್ತೀರ್ಣವನ್ನು ಒತ್ತುವರಿ ಮಾಡಿಕೊಂಡಿರುವ ಕಾರಣ ವಾದಿ ದಾವೆಯನ್ನು ದಾಖಲು ಮಾಡುವ ಕಾಲಕ್ಕೆ ಈ ಹಂತದಲ್ಲಿ ಸಂಪೂರ್ಣ ಸ್ವತಿನಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ವಾದಿಯು ಹಾಜರುಪಡಿಸಿರುವ ಕಂದಾಯ ದಾಖಲಾತಿಗಳಲ್ಲಿ ದಾವಾ ಅನುಸೂಚಿತ ಸ್ವತ್ತಿನ ಸಂಪೂರ್ಣ ಸ್ವತ್ತಿನಲ್ಲಿ ಸ್ವಾದೀನಾನುಭವಲ್ಲಿ ಇರುವುದಾಗಿ ಕಂಡು ಬರುತ್ತಿದ್ದರೂ ಸಹ, ವಾದಿಯು ಹಾಜರುಪಡಿಸಿರುವ ಹದ್ದುಬಸ್ತು ನಕಾಶೆಯಂತೆ ದಾವಾ ಅನುಸೂಚಿತ ಸ್ವತ್ತಿನ ಸಂಪೂರ್ಣ ಸ್ವತ್ತಿನಲ್ಲಿ ಸ್ವಾದಿನಾನುಭವದಲ್ಲಿ ಇರುವುದಿಲ್ಲ ಎಂಬುದಾಗಿ ಕಂಡು ಬರುತ್ತಿದೆ.

11. ವಾದಿಯು ಹಾಜರುಪಡಿಸಿರುವ ದಾವಾ ಅನುಸೂಚಿತ ಸ್ವತ್ತಿನ ಕಂದಾಯ ದಾಖಲಾತಿಗಳಂತೆ, ವಾದಿಯು ದಾವಾ ಅನುಸೂಚಿತ ಸಂಪೂರ್ಣ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ಮೇಲ್ನೋಟಕ್ಕೆ ಕಂಡುಬಂದಿದ್ದರೂ ಸಹ ವಾದಿಯೇ ಹಾಜರುಪಡಿಸಿರುವ ನಕಾಶೆಯಂತೆ ಪ್ರತಿವಾದಿಯು ದಾವಾ ಅನಸೂಚಿತ ಸ್ವತ್ತಿನ 40 ಸೆಂಟ್ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ದಾಖಲಾತಿ ಲಭ್ಯವಿದ್ದು, ಅದರಂತೆ ವಾದಿ ದಾವಾ ಅನುಸೂಚಿತ ಸ್ವತ್ತಿನ ಸಂಪೂರ್ಣ ಸ್ವತ್ತಿನಲ್ಲಿ ಸ್ವಾಧೀನಾನುನುಭವದಲ್ಲಿ ಇರುವುದಿಲ್ಲ ಎಂಬುದು ಕಂಡುಬರುತ್ತದೆ. ಪ್ರತಿವಾದಿಯೂ ಅಕ್ರಮವಾಗಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂಬುದಾಗಿ ಭಾವಿಸಿಕೊಂಡರೂ ಸಹ ಈ ಹಂತದಲ್ಲಿ ವಾದಿಯು ದಾವಾ ಅನಸೂಚಿತ ಸ್ವತ್ತಿನ ಸಂಪೂರ್ಣವಾದ ವಿಸ್ತೀರ್ಣದಲ್ಲಿ ಸ್ವಾಧೀನಾನುಭದಲ್ಲಿ ಇಲ್ಲ ಎಂಬುದು ಸಹ ಕಂಡುಬರುತ್ತಿದೆ. ಸಾಮಾನ್ಯವಾಗಿ ಮಧ್ಯಂತರ ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ, ದಾವಾ ಅನುಸೂಚಿತ ಸ್ವತ್ತಿನಲ್ಲಿನ ಸ್ವಾದೀನಾನುಭವವನ್ನು ಮಾತ್ರವೇ ಪರಿಗಣಿಸಬೇಕು ಹೊರತು, ಕಾನೂನುಬದ್ದ ಸ್ವಾದೀನಾನುಭವನ್ನು ಅಲ್ಲ. ಈ ದಾವೆಯಲ್ಲಿ ಹಸ್ತುಬಸ್ತು ವರದಿಯಲ್ಲಿ ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂಬುದಾಗಿ ಕಂಡು ಬರುತ್ತಿದ್ದರೂ ಸಹ, ಈ ದಾವೆಯಲ್ಲಿ ಈ ಹಂತದಲ್ಲಿ ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಸಂಪೂರ್ಣ ಸ್ವಾದೀನಾನುಭವದಲ್ಲಿ ಇರುವುದಿಲ್ಲ ಎಂಬುದು ಕಂಡು ಬರುತ್ತಿದೆ. ಮಧ್ಯಂತರ ಅರ್ಜಿಯ ಮೇಲೆ ಆದೇಶಿಸುವ ಸಮಯದಲ್ಲಿ ಕೇವಲ ಮೇಲ್ನೋಟದಲ್ಲಿ ಕಂಡುಬರುವ ಸಂಗತಿಗಳನ್ನು ಪರಿಗಣಿಸಬೇಕೇ ಹೊರತು ಅಧಿ ವಿಚಾರಣೆಯ ನಂತರ ಪರಿಗಣಿಸಬಹುದಾದ ಸಂಗತಿಗಳ ಬಗ್ಗೆ ಸಹ ಚರ್ಚಿಸುವ ಅವಶ್ಯಕತೆ ಇರುವುದಿಲ್ಲ. ಈ ದಾವೆಯಲ್ಲಿ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸಂಪೂರ್ಣ ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂಬುದು ವಾದಿಯೇ ಹಾಜರುಪಡಿಸಿರುವ ದಾಖಲಾತಿಯಿಂದ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಹಾಗಾಗಿ, ಒಂದು ವೇಳೆ ಈ ಹಂತದಲ್ಲಿ ಶಾಶ್ವತ ನಿರ್ಭಂದಕಾಜ್ಞೇಯನ್ನು ಆದೇಶಿಸಿದ ಪಕ್ಷದಲ್ಲಿ ಸದರಿ ಆದೇಶದ ಲಾಭವನ್ನು ಪಡೆದು ವಾದಿಯು ಪ್ರತಿವಾದಿಯನ್ನು ಸ್ವತ್ತಿನಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡಬಹುದು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ ಈ ಹಂತದಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೇ ಆದೇಶವನ್ನು ಆದೇಶಿಸಿದಲ್ಲಿ ಅದರ ದುರ್ಲಾಭ ಪಡೆಯುವ ಸಂಗತಿಯು ಹೆಚ್ಚಾಗಿರುತ್ತದೆ. ಆದ್ದರಿಂದ, ಅನುಕೂಲತೆಯ ಸಿಂಧು ಪ್ರತಿವಾದಿಯ ಪರವಾಗಿ ಇರುತ್ತದೆ, ವಾದಿಯ ಪರವಾಗಿ ಇರುವುದಿಲ್ಲ ಎಂಬುದಾಗಿ ತೀರ್ಮಾನಕ್ಕೆ ಬಂದು **ಅಂಶ-1 ರಿಂದ 3ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

**<u>12. ಅಂಶ-4 :-</u>** ಮೇಲ್ಕಂಡಂತೆ ಅಂಶ 1ರಿಂದ 3 ರಲ್ಲಿ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆಃ-

**<u>-: ಆದೇಶ :-</u>**

ವಾದಿಯು/ಅರ್ಜಿದಾರರು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಮದ್ಯಂತರ ಅರ್ಜಿ ಸಂಖ್ಯೆ 2ನ್ನು ಈ ಮೂಲಕ ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ02.07.2026 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**-: ಆದೇಶ :-**

ವಾದಿಯು/ಅರ್ಜಿದಾರರು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಮಧ್ಯಂತರ ಅರ್ಜಿ ಸಂಖ್ಯೆ 2ನ್ನು ಈ ಮೂಲಕ ತಿರಸ್ಕರಿಸಲಾಗಿದೆ.

ವಿವಾದಾಂಶ ರಚನೆಗಾಗಿ ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ 03.07.2026

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.